## ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್.ಸಿ. ನ್ಯಾಯಾಲಯ, ಬೇಲೂರು

ಸಿ.ಸಿ. ನಂ. 43/2017

ಸಾಕ್ಷಿಃ ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂಃ 2

### ಸತ್ಯ ಪ್ರತಿಜ್ಞೆಯ ಮೇರೆಗೆ, ತಾ: 10–12–2025

### ಪಾಟೀ ಸವಾಲುಃ ಆರೋಪಿತರ  ಪರ ಶ್ರೀ ಬಿ ಎಸ್ ಜಿ ಎಸ್ ವಕೀಲರಿಂದಃ–

ನಾನು 3ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನಮಗೂ ಮತ್ತು ಆರೋಪಿಗಳಿಗೂ ಸುಮಾರು 9 ವರ್ಷಗಳಿಂದ ಮಾತುಕತೆ ಇರುವುದಿಲ್ಲ. ಮನೆ ಕಟ್ಟುವ ವಿಚಾರದಲ್ಲಿ ನಮಗೂ ಮತ್ತು ಆರೋಪಿಗಳಿಗೂ ವೈಮನಸ್ಸು ಇದ್ದು, ನಾವು ಮಾತನಾಡುವುದಿಲ್ಲ ಎಂದರೆ ಸರಿ. ಇದು ಬಿಟ್ಟು ನಮಗೆ ಬೇರೆ ಯಾವುದೇ ವೈ ಮನಸ್ಸು ಇರುವುದಿಲ್ಲ. 1ನೇ ಆರೋಪಿ ನನ್ನ ಹಿರಿಯ ಮಗನಾದ ಆನಂದನ ಹೆಂಡತಿಯ ತಂದೆ. ಗಲಾಟೆ ಆದಾಗ ಸಂಜೆ 7.30 ಆಗಿತ್ತು. ಆಗ ಕತ್ತಲಾಗಿತ್ತು ಎಂದರೆ ಸಾಕ್ಷಿ ಸ್ವಲ್ಪ ಮಬ್ಬಾಗಿತ್ತು ಎಂದು ಉತ್ತರಿಸುತ್ತಾರೆ. 1ನೇ ಆರೋಪಿಗೆ 70 ವರ್ಷ ಆಗಿರುತ್ತದೆ. ನನಗೆ ದೂರ ಕಾಣಿಸುತ್ತದೆ, ಹತ್ತಿರದಲ್ಲಿರುವುದು ಅಷ್ಟಾಗಿ ಕಾಣಿಸುವುದಿಲ್ಲ. ಕನ್ನಡಕ ತೆಗೆದರೆ ನನ್ನ ಒಂದು ಕಣ್ಣು ಕಾಣಿಸುವುದಿಲ್ಲ. ಗಲಾಟೆ ಆದ ಜಾಗದ ಚೆಕ್ಕುಬಂದಿ, ಪೂರ್ವಕ್ಕೆ ನಮ್ಮ ಹಿತ್ತಲು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ತಮ್ಮಣ್ಣಯವರ ಮನೆ ಮತ್ತು ದಕ್ಷಿಣಕ್ಕೆ ಆರೋಪಿಗಳ ಮನೆ. ನಮ್ಮ ಮನೆಯ ಎಡಭಾಗಕ್ಕೆ ಆರೋಪಿಗಳ ಮನೆ ಇರುತ್ತದೆ.

ಗಲಾಟೆ ನಮ್ಮ ಮತ್ತು ಆರೋಪಿಗಳ ಮನೆಯ ಮಧ್ಯದಲ್ಲಿ ಆಗಿರುತ್ತದೆ. ನಾವು ಮನೆ ಕಟ್ಟುತ್ತಿರಲಿಲ್ಲ, ನೀರು ಹಾಕುತ್ತಿರಲಿಲ್ಲ ಮತ್ತು ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮಂಗಳೂರು ಮತ್ತು ಬೆಂಗಳೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಆರೋಪಿಗಳು ನನ್ನನ್ನು ಮತ್ತು ಚಾಸಾ–1 ರವರನ್ನು ಹಿಡಿದು ಎಳೆದಾಡಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸೊಂಟದ ಮೂಳೆ ಮುರಿದು ಹೋಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಗಳು ಹೊಡೆದರು ಎಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ.

ಎಂ.ಒ–1 ಅನ್ನು ನಾನು ಇವತ್ತೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ–1 ರಲ್ಲೇ ಹೊಡೆದಿದ್ದು ಎಂದು ಹೇಳಲು ಪ್ರತ್ಯೇಕ ಗುರುತು ಮಾಡಿದೀರಾ ಎಂದರೆ ಸಾಕ್ಷಿ ಮಾಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾದಾರಣವಾಗಿ ಎಲ್ಲ ಮನೆಗಳಲ್ಲೂ ಅಡುಗೆ ಮಾಡಲು ಎಂ.ಒ–1 ರ ತರ ಇರುವ ಕೋಲುಗಳು ಇಟ್ಟಿರುತ್ತಾರೆ ಎಂದರೆ ಸರಿ. ನಾನು 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯಲ್ಲಿದ್ದಾಗ ಚಾಸಾ–3 ರವರು ನನ್ನನ್ನು ನೋಡಿಕೊಂಡು ಆಸ್ಪತ್ರೆಯಲ್ಲಿದ್ದರು. ನಾನು ಚಾಸಾ–1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಹಲ್ಲೆ ಮಾಡಿ ಅವಾಚ್ಯ ಶಬ್ಧಗಳಿಂದ ಬೈದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ದೊಣ್ಣೆಯಿಂದ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಎಂ.ಒ–1 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಅದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು**